# ಆಹಾ ಸುದ್ದಿ!

★ ಸಸಿತೋಟ

ಟ್ರಂಪ್ ಅಧ್ಯಕ್ಷನಾದರೆ ಅಮೆರಿಕ ಬಿಡುವುದಾಗಿ ಹೇಳಿದ್ದ ಅಲ್ಲಿಯ ಯುವತಿಯರಿಗೆ ಸಿಹಿ ಸುದ್ದಿ. ಸ್ವೀಡನ್ನಿನ ಛಾಯಾಗ್ರಾಹಕ ಹಲ್ಲೆನ್ ಎಂಬಾತ ಇಬೇ ಆನ್‌ಲೈನ್ ಹರಾಜು ಕಂಪೆನಿಯಲ್ಲಿ 50 ಸಾವಿರ ಡಾಲರ್ ಆರಂಭಿಕ ಹರಾಜು ಕೂಗಿದ್ದಾನಂತೆ. ಆತನನ್ನು ಮದುವೆಯಾಗ ಬಯಸುವ ಯುವತಿಯರು ಈ ಮೊತ್ತವನ್ನು ಏರಿಸುತ್ತ ಹೋಗಬಹುದು. ಅಮೆರಿಕ ಎಂಬ ಶಬ್ದಕ್ಕೇ ಅಗಾಧ ಮೌಲ್ಯವಿರುವಾಗ ಲಲನೆಯರಿಗೆ ಇನ್ನೆಷ್ಟಿರಬಹುದು?




ಆಸ್ಟ್ರೇಲಿಯಾದ ಮೊಸಳೆ ಪಾರ್ಕ್‌ನ ಬಿಲ್ಲಿ ತನ್ನ ಗೆಳತಿಗೆ ಮದುವೆ ಪ್ರಸ್ತಾವ ಮಾಡಿದ್ದು ಭಾರಿ ಗಾತ್ರದ ಮೊಸಳೆಯನ್ನು ಸಾಕ್ಷಿಯನ್ನಾಗಿಟ್ಟುಕೊಂಡು. ಆಕೆ ಪ್ರಸ್ತಾವ ತಿರಸ್ಕರಿಸುವ ಮಾತೇ ಇಲ್ಲ, ಬಿಡಿ.

ಯೂಟ್ಯೂಬ್‌ನ 'ವಿಲೇಜ್ ಫುಡ್ ಫ್ಯಾಕ್ಟರಿ' ಯಲ್ಲಿ ಹಾಕಿದ ಈ ವಿಡಿಯೊ ವೈರಲ್ ಆಗಿಬಿಟ್ಟಿದೆ. ಗ್ರಾಮಸ್ಥನೊಬ್ಬ 300 ಮೊಟ್ಟೆಗಳನ್ನು ನೆಲದಲ್ಲಿ ಹರಡಿಕೊಂಡು, ಒಲೆಯ ಮೇಲೆ ದೊಡ್ಡ ಕಡಾಯಿ ಇಟ್ಟುಕೊಂಡು ಯಾವ ವಿಶೇಷ ತಿನಿಸು ಮಾಡಲು ಹೊರಟಿದ್ದಾನೆ ಎಂದು ಎಲ್ಲರೂ ಕುತೂಹಲದಿಂದ ವೀಕ್ಷಿಸಿದ್ದೇ ವೀಕ್ಷಿಸಿದ್ದು. ಆದರೆ ಆತ ಸರಳವಾದ ಮೊಟ್ಟೆ ಮಸಾಲೆ ಮಾಡಿಕೊಂಡು ಎಲೆಯ ಮೇಲೆ ಅನ್ನದ ಜೊತೆ ಪಟ್ಟಾಗಿ ಹೊಡೆದು ನಗರದ ಹೈಕಳಿಗೆ ಸಡ್ಡು ಹೊಡೆಯಲು 300 ಮೊಟ್ಟೆ ಬಳಸಬೇಕಾಯಿತು.





ಚೀನಾದಲ್ಲಿ ಕಿವಿ ಕಳೆದುಕೊಂಡ ಯುವಕನ ಎಲುಬು, ಚರ್ಮ ಬಳಸಿ ಆತನ ತೋಳಿನ ಮೇಲೆ ಕಿವಿ ಬೆಳೆಸಲಾಗಿದೆಯಂತೆ. ಇದನ್ನು ಶಸ್ತ್ರಚಿಕಿತ್ಸೆ ಮೂಲಕ ತೆಗೆದು ತಲೆಗೆ ಜೋಡಿಸಲಾಗುವುದಂತೆ. ಮೈತುಂಬ ಕಿವಿ, ಕಣ್ಣಾಗಿರಬೇಕು ಎಂಬ ಹಿರಿಯರ ಕಿವಿಮಾತು ಹೇಗೆ ನಿಜವಾಗಿಬಿಟ್ಟಿದೆ.



ಸ್ಲೊವಾಕಿಯಾದಲ್ಲಿ ಸಮಾಧಿ ಕುಣಿ ತೋಡುವ ಸ್ಪರ್ಧೆ ನಡೆಯಿತಂತೆ. ವೇಗ, ಗುಣಮಟ್ಟ, ಸೌಂದರ್ಯ ಇತ್ಯಾದಿಗಳ ಬಗ್ಗೆ ಗಮನಹರಿಸಿ ತೋಡಬೇಕಿತ್ತಂತೆ. ಶವ ಹುಗಿಯುವ ಸ್ಪರ್ಧೆಯೇನೋ ಬಹಳ ಸುಲಭ, ಸುಡುವ ಸ್ಪರ್ಧೆಯಾಗಿದ್ದರೆ..!

ಟ್ರಂಪ್ ಅಧ್ಯಕ್ಷನಾಗಿದ್ದಕ್ಕೆ ದುಃಖಿತಳಾದ ಅಮೆರಿಕದ ಜೆನ್ನಿ ಎಂಬಾಕೆ ಇಡೀ ದಿನ ರಸ್ತೆಯಲ್ಲಿ ಕಂಡಕಂಡವರನ್ನು ಅಪ್ಪಿಕೊಂಡು ಸಾಂತ್ವನ ಪಡೆದಳಂತೆ. ಇನ್ನೂ ನಾಲ್ಕು ವರ್ಷಗಳ ಕಾಲ ದುಃಖ ಶಮನಕ್ಕೆ ಇನ್ನೆಷ್ಟು ಅಪ್ಪುಗೆಗಳು ಬೇಕಾಗಬಹುದು? ಲೆಕ್ಕ ಹಾಕಿಕೊಂಡವರು ಓಡಾಡಲು ಬೇರೆ ರಸ್ತೆಯ ಹುಡುಕಾಟ ಆರಂಭಿಸಿರಬಹುದು.